ಕರ್ನಾಟಕ ಸರ್ಕಾರ

# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

**ಪ್ರೊ. ಟಿ.ಡಿ. ಕೆಂಪರಾಜು**
ಕುಲಪತಿಗಳು

ಶ್ರೀ ದೇವರಾಜ್ ಅರಸ್ ಬಡಾವಣೆ
ಟಮಕ, ಕೋಲಾರ – 563 103
ದೂರವಾಣಿ : +91 8152 243150
+91 8152 243151
ಇ-ಮೇಲ್: vc@bnu.ac.in

ಸಂಖ್ಯೆ: ಬೆಂ.ಉ.ವಿ.ವಿ/ವಿ.ಸಿ.ಪಿ/ 74 / ಮತದಾನ/ಸಂಯೋಜಿತ ಕಾಲೇಜುಗಳು/2019-20    ದಿನಾಂಕ: 12.2.2019

**ವಿಷಯ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಮತದಾರರಾಗಿ ಕಡ್ಡಾಯ ನೊಂದಣಿ ಮಾಡಿರುವ ಬಗ್ಗೆ ಮತ್ತು ಕಾಲೇಜಿನ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಮತದಾನ ನೊಂದಣಿ ಮತ್ತು ಮತದಾನದ ಹಕ್ಕಿನ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಯೋಜಿಸಿ ಯಶಸ್ವಿಗೊಳಿಸುವ ಬಗ್ಗೆ.**

* * * * *

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ತಿಳಿಸಿರುವಂತೆ ಅರ್ಹ ಮತದಾರರಲ್ಲಿ ಮತದಾನದ ನೊಂದಣಿ ಮತ್ತು ಹಕ್ಕಿನ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಸಂಬಂಧ ಈ ಕೆಳಕಂಡ ಕಾರ್ಯಕ್ರಮಗಳನ್ನು ಯೋಜಿಸಿ ಕಾರ್ಯರೂಪಕ್ಕೆ ತರಲು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಸಂಯೋಜಿತ ಕಾಲೇಜಿನ ಪ್ರಾಂಶುಪಾಲರು ಸೂಕ್ತ ಕ್ರಮಕೈಗೊಳ್ಳಲು ಕೋರಿಕೆ.

1) **ವಿದ್ಯಾರ್ಥಿಗಳನ್ನು "ಕಾಲೇಜು ಕ್ಯಾಂಪಸ್‌ನ ಮತದಾನ ರಾಯಭಾರಿ(College Campus Ambassadors)" ಗಳನ್ನಾಗಿ ನಾಮನಿರ್ದೇಶನ ಮಾಡಿ ನೇಮಿಸುವುದು.**

   ಪ್ರತಿ ಕಾಲೇಜಿನಲ್ಲಿ 3 ರಿಂದ 5 ವಿದ್ಯಾರ್ಥಿಗಳನ್ನು ವಿವಿಧ ತಂಡದಲ್ಲಿ ಕಾಲೇಜು ಕ್ಯಾಂಪಸ್‌ನ ಮತದಾನ ರಾಯಭಾರಿಗಳಾಗಿ ನಾಮನಿರ್ದೇಶನ ಮಾಡಿ, ಈ ವಿದ್ಯಾರ್ಥಿ ರಾಯಭಾರಿಗಳು ನೊಂದಣಿ ಆಗದ ಇತರೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರನ್ನು ನೊಂದಣಿ ಮಾಡಿಸುವುದರಲ್ಲಿ ಸಹಾಯ ಮಾಡುವುದು ಮತ್ತು ಮತದಾನದ ಪ್ರಾಮುಖ್ಯತೆ ಹಾಗೂ ಹಕ್ಕಿನ ಬಗ್ಗೆ ಅರಿವು ಮೂಡಿಸುವ ಬಗ್ಗೆ ಸೂಕ್ತ ತಿಳುವಳಿಕೆ ನೀಡುವುದು. ಈ ಸಂಬಂಧ ಫಾರಂ ನಂ.6ನ್ನು ಉಪಯೋಗಿಸಿಕೊಳ್ಳುವುದು.

2) **ಅಧ್ಯಾಪಕರ ತಂಡವನ್ನು ನೋಡಲ್ ಅಧಿಕಾರಿಗಳಾಗಿ ನೇಮಕ ಮಾಡುವುದು.**

   ಸದರಿ ಮತದಾನ ನೊಂದಣಿ ಮತ್ತು ಅಭಿಯಾನ ಕಾರ್ಯಕ್ರಮಕ್ಕೆ ಪೂರಕವಾಗಿ ವಿದ್ಯಾರ್ಥಿ ರಾಯಭಾರಿಗಳಿಗೆ ಮತ್ತು ಇತರೆ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಸೂಕ್ತ ಅಧ್ಯಾಪಕರನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವುದು ಮತ್ತು ಅವರು ಸದರಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗಿಯಾಗುವುದು.

-2-

3) <u>ಮತದಾನ ಸಾಕ್ಷರತಾ ಸಮಿತಿ (Electoral Literacy Culb)ಯನ್ನು ಸ್ಥಾಪಿಸುವ ಬಗ್ಗೆ.</u>

ಸದರಿ ವಿಷಯಕ್ಕೆ ಪೂರಕವಾಗಿ ನಿರಂತರ ಕಾರ್ಯಕ್ರಮ/ಚಟುವಟಿಕೆಗಳನ್ನು ನಡೆಸಲು ಮತದಾನ ಸಾಕ್ಷರತಾ ಸಮಿತಿ (Electoral Literacy Culb)ಗಳನ್ನು ಸ್ಥಾಪಿಸುವುದು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಸಂಕೀರಣ, ಜಾಥಾ, ಇತ್ಯಾದಿ ವಿಸ್ತರಣಾ ಕಾರ್ಯಗಳನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಯೋಜಿಸಿ ಕಾರ್ಯಗತಗೊಳಿಸುವುದು.ಸದರಿ ಸಮಿತಿಯಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಅಧ್ಯಾಪಕೇತರ ಸಿಬ್ಬಂದಿಯು ಸಕ್ರಿಯವಾಗಿ ಕಾರ್ಯನಿರ್ವಹಿಸುವಲ್ಲಿ ಪ್ರಾಂಶುಪಾಲರು ಕ್ರಮಕೈಗೊಳ್ಳುವುದು. ಈ ಪ್ರಕ್ರಿಯೆಯಲ್ಲಿ ವಿಶ್ವವಿದ್ಯಾಲಯವು ಸಹ ಸಹಕರಿಸುತ್ತದೆ.

ಸದರಿ ವಿಚಾರದ ಬಗ್ಗೆ ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಕಛೇರಿಯು ತಮಗೆ ಈಗಾಗಲೇ ಸೂಕ್ತ ಮಾಹಿತಿ ಮತ್ತು ನಿರ್ದೇಶನ ನೀಡಿರುತ್ತದೆ.ಆದ್ದರಿಂದ ಪ್ರಾಂಶುಪಾಲರು ಈ ಕಾರ್ಯಕ್ರಮವನ್ನು ಸಾಮಾಜಿಕ ಮತ್ತು ಅಧಿಕೃತ ಜವಾಬ್ದಾರಿ ಎಂದು ಆದ್ಯತೆಯ ಮೇಲೆ ಪರಿಗಣಿಸಿ ವಿವಿಧ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ ಸಂಕ್ಷಿಪ್ತ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು.

ಗೆ,

ಎಲ್ಲಾ ಪ್ರಾಂಶುಪಾಲರುಗಳು,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳು

ಕುಲಪತಿಗಳು

ಪ್ರತಿ:

1. ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ,ಟಮಕ, ಕೋಲಾರ-563103
2. ಕಛೇರಿ ಪ್ರತಿ.